**<u>ದಿನಾಂಕಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಕೆ **For** ಟಿ ಎಸ್ ಆರ್ ವಕೀಲರಿಂದಃ</u>

ನಿಮ್ಮ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿದ್ದ ಕಾಲಕ್ಕೆ ನೀವು ವಿಜಯಕುಮಾರವರಿಂದ ಯಾವ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದೀರಿ ಎಂದರೆ ವಿಜಯಕುಮಾರವರಿಗೆ ನೊಂದಣಿ ಆದ ಪತ್ರಗಳನ್ನು ಪಡೆದುಕೊಂಡಿದ್ದೆ. ವಿಜಯಕುಮಾರವರಿಗೆ ಸ್ವತ್ತು ಹೇಗೆ ಬಂದಿತ್ತು ಎಂದರೆ ನೊಂದಾಯಿತ ಪತ್ರದ ಮೂಖಾಂತರ ಬಂದಿತ್ತು. ವಿಜಯಕುಮಾರವರಿಗೆ ಅರವಿಂದರವರು ನೊಂದಾಯಿತ ಪತ್ರ ಮಾಡಿಕೊಟ್ಟಿದ್ದರು. ಅರವಿಂದರವರಿಗೆ ಸ್ವತ್ತು ಹೇಗೆ ಬಂದಿತ್ತು ಎಂದರೆ ಅವರ ತಂದೆಯವರ ವಿಲ್ ಯಾ ಮರಣ ಶಾಸನ ದಿಃ14.12.1992 ರ ಮೂಖಾಂತರ ಬಂದಿತ್ತು. ವಿಲ್ ಯಾ ಮರಣ ಶಾಸನವನ್ನು ನೀವು ಕ್ರಯ ಪತ್ರ ಮಾಡಿಸುವ ಕಾಲಕ್ಕೆ ಪಡೆದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ಯಾ ಮರಣ ಶಾಸನವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಗ್ಗೆ ನನಗೆ ನೆನಪಿಲ್ಲ. ನಿಮ್ಮ ದಾಖಲಾತಿಗಳಲ್ಲಿ ವಿಲ್ ಯಾ ಮರಣ ಶಾಸನವನ್ನು ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಿಲ್ ಯಾ ಮರಣ ಶಾಸನವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನಿಮಗೆ ಯಾವುದೆ ತೊಂದರೆ ಇದೇಯೆ

ಎಂದರೆ ಆ ವಿಲ್ ಯಾ ಮರಣ ಶಾಸನ ನನ್ನ ಬಳಿ ಇದೆ ಎಂಬುದರ ಬಗ್ಗೆ ನನಗೆ ಅನುಮಾನ ಇದೆ ಬ್ಯಾಂಕ ನಲ್ಲಿ ಲೋನ್ ಪಡೆದುಕೊಳ್ಳುವ ಕಾಲಕ್ಕೆ ವಿಲ್ ಯಾ ಮರಣ ಶಾಸನವನ್ನು ಬ್ಯಾಂಕಗೆ ಕೊಟ್ಟಿರಬಹುದು ಸರಿಯಾಗಿ ನನಗೆ ನೆನಪಿಲ್ಲ. REPCO HOME Finance Limited BANK ನಲ್ಲಿ ಸಾಲ(ಲೋನ್) ಪಡೆದುಕೊಂಡಿದ್ದೇನೆ. ಸಾಲವನ್ನು ಇನ್ನೂ ಕಟ್ಟುತ್ತಿದ್ದೇವೆ. ಬ್ಯಾಂಕನಿಂದ ವಿಲ್ ಯಾ ಮರಣ ಶಾಸನವನ್ನು ಹಾಜರು ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಬ್ಯಾಂಕನಲ್ಲಿ ಕೇಳುತ್ತೇನೆ. ಬ್ಯಾಂಕನರವರು ವಿಲ್ ಯಾ ಮರಣ ಶಾಸನವನ್ನು ಅವರಿಂದ ಪಡೆದುಕೊಂಡಿರುವ ಬಗ್ಗೆ ನನಗೆ ಸರಿಯಾಗಿ ನೆನಪಿಲ್ಲ. ಅನೀಲ ಕುಮಾರವರಿಗೆ ಯಾವುದೆ ವಿಲ್ ಯಾ ಮರಣ ಶಾಸನವು ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದಕಾರಣ ಅನೀಲ ಕುಮಾರವರಿಗೆ ದಾವಾ ಸ್ವತ್ತಿನ ಮೇಲೆ ಹಕ್ಕು ಮತ್ತು ಮಾಲೀಕತ್ವ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅರವಿಂದರವರು ಮಾರಾಟ ಮಾಡಿದ್ದ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿರಬಹುದು.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ** ಗಣಕ ಯಂತ್ರದಲ್ಲಿ **ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**